## ಸಿಟಿ ಸುದ್ದಿ

# ನಗರದಲ್ಲಿ ಏಟ್ರಿಯ ಐಪಿಟೀವಿ




ಬೆಂಗಳೂರು: ಎಸಿಟಿ ಟೆಲಿವಿಷನ್ ಬೆಂಗಳೂರಿನಲ್ಲಿ ಎಸಿಟಿ ಸಂವಹನ (ಇಂಟರ‍್ಯಾಕ್ಟಿವ್) ಐಪಿಟೀವಿ ಸೇವೆ ಆರಂಭಿಸಿದೆ. 450 ಕೋಟಿ ರು. ಬಂಡವಾಳ ಹೂಡಿಕೆಯೊಂದಿಗೆ ಬೆಂಗಳೂರಿನಲ್ಲಿ ಸಂವಹನ ಟಿವಿ ಸೇವೆ ಆರಂಭಿಸಿದ ಮೊದಲ ಸಂಸ್ಥೆ ಎಂಬ ಹೆಗ್ಗಳಿಕೆಗೆ ಎಸಿಟಿ ಪಾತ್ರವಾಗಿದೆ. ಬ್ರಾಡ್‌ಬ್ಯಾಂಡ್ ಸಂಪರ್ಕದ ಮೂಲಕ ಇಂಟರ್‌ನೆಟ್ ಪ್ರೋಟೋಕಾಲ್ (ಐಪಿ)ನೊಡನೆ ಡಿಜಿಟಲ್‌ಗಿಂತ ಉತ್ತಮ ಸೇವೆ ನೀಡುವ ಈ ಸೇವೆಯಲ್ಲಿ ಟೆಲಿವಿಷನ್, ಅತಿ ವೇಗದ ಇಂಟರ್‌ನೆಟ್ ಸಂಪರ್ಕ ಮತ್ತು ದೂರವಾಣಿ ಸೇವೆ ಅಡಕಗೊಂಡಿವೆ., ಗುರುವಾರ ಸೇವೆಯ ಉದ್ಘಾಟನೆ ಸಂದರ್ಭದಲ್ಲಿ ಮಾತನಾಡಿದ ಎಸಿಟಿ ಟೆಲಿವಿಷನ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಸುಂದರ್ ರಾಜು, ನಮ್ಮ ಗ್ರಾಹಕರಿಗೆ ಭವಿಷ್ಯದ ಟೆಲಿವಿಷನ್ ಮಾರುಕಟ್ಟೆಯಲ್ಲಿ ಅತ್ಯುತ್ತಮ, ವಿಶ್ವಾಸಾರ್ಹ ಸೇವೆ ನೀಡುವುದೇ ನಮ್ಮ ಗುರಿ ಎಂದರು. ಎಸಿಟಿ ಇಂಟರ‍್ಯಾಕ್ಟಿವ್ ಟೀವಿ ಬಳಕೆದಾರ ತನ್ನ ಇಚ್ಛೆಯ ಚಾನೆಲ್ ನೋಡಬಹುದು. ಮೂರು ಭಾಷೆಗಳ 4 ಸಾವಿರ ಸಿನಿಮಾಗಳನ್ನು ಹೊಂದಿರುವ ಲೈಬ್ರೆರಿ ಸಹಾಯದಿಂದ ತಮಗೆ ಬೇಕಾದ ಸಿನಿಮಾ ನೋಡಬಹುದು. ಇಂಟರ್‌ನೆಟ್‌ನಲ್ಲಿ ಲಭ್ಯವಿರುವ ವಿಡಿಯೋ ನೋಡಬಹುದು. ಒಂದು ಕಾರ್ಯಕ್ರಮ ನೋಡುತ್ತಿರುವಾಗ ಇನ್ನೊಂದನ್ನು ರೆಕಾರ್ಡ್ ಮಾಡಬಹುದು. ಬಹುಮುಖಿ ಗೇಮ್ ಆಡಲಿ, ಇ-ಮೇಲ್, ವಾಯಿಸ್ ಮೇಲ್ ಕಳುಹಿಸಬಹುದು, ಆನ್‌ಲೈನ್ ಶಾಪಿಂಗ್, ಶಿಕ್ಷಣ, ಬ್ಯಾಂಕಿಂಗ್ ಪಡೆಯಲು ಇದ ಸಹಾಯಕ ಎಂದು ಕಂಪೆನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಾಲಾ ಮಲ್ಲಾಡಿ ವಿವರಿಸಿದರು. ವಿವರಕ್ಕೆ 080-4284 0000 ಸಂಪರ್ಕಿಸಬಹುದು.